# ಮಾನಸ ಗಂಗೋತ್ರಿ

**ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮೈಸೂರು**

ಸಂಚಿಕೆ-10 | ಸಂಪುಟ-49 | 16 ಜನವರಿ 2021 | ಪುಟ-04


## ಎನ್‌ಇಪಿ ಅನುಷ್ಠಾನಕ್ಕೆ ಸಕಲ ಸಿದ್ಧತೆ

### ವಿಚಾರ ಸಂಕಿರಣದಲ್ಲಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಹೇಳಿಕೆ

**ಮಾನಸಗಂಗೋತ್ರಿ ವಾರ್ತೆ, ಮೈಸೂರು:** ಹೊಸ ಶಿಕ್ಷಣ ನೀತಿ–2020 ಅನುಷ್ಠಾನವು ಭಾರತೀಯ ಶಿಕ್ಷಣ ವ್ಯವಸ್ಥೆಯನ್ನೇ ಪರಿವರ್ತಿಸುವ ಮಾರ್ಗದರ್ಶಿ ಸೂತ್ರವಾಗಿದ್ದು, ಅತ್ಯಂತ ಪ್ರಾಯೋಗಿಕ ಶಿಕ್ಷಣ ನೀತಿ ಎಂದೇ ಪರಿಗಣಿಸಲ್ಪಟ್ಟಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ ನಾರಾಯಣ್ ತಿಳಿಸಿದರು. ಮೈಸೂರು ವಿವಿ, ಕರಾಮುವಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಹಾಗೂ ಶಿಕ್ಷಣ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಮೈಸೂರು ವಿವಿಯ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಜ.9 ಶನಿವಾರ ಆಯೋಜಿಸಿದ್ದ "ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಷ್ಠಾನ ಅವಕಾಶಗಳು ಮತ್ತು ಮುಂದಿನ ದಾರಿ" ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವರ್ಚುವಲ್ ಮೂಲಕ ಮಾತನಾಡಿದ ಅವರು, ವಿಶ್ವವಿದ್ಯಾಲಯಗಳು ಶಿಕ್ಷಣ ನೀತಿಯನ್ನು ಗಂಭೀರವಾಗಿ ಪರಿಗಣಿಸಿ, ಕೆಲಸ ಆರಂಭಿಸಿ, ಅಗತ್ಯ ಸೌಲಭ್ಯ ಕಲ್ಪಿಸಲಾಗುವುದು. ಹೊಸ ಶಿಕ್ಷಣ ನೀತಿಗೆ ದೇಶದಾದ್ಯಂತ 2ಲಕ್ಷಕ್ಕೂ ಹೆಚ್ಚು ಸಲಹೆಗಳನ್ನು ಪಡೆಯಲಾಗಿದೆ. ಈ ಪ್ರಾಯೋಗಿಕ ಶಿಕ್ಷಣ ನೀತಿ ಜನರ ಭವಿಷ್ಯದ ಭರವಸೆಗಳನ್ನು ಸಾಕಾರಗೊಳಿಸಲಿದೆ. ಈ ನೀತಿಯ ಮೂಲ ತತ್ವಗಳು ಪ್ರತಿ ವಿದ್ಯಾರ್ಥಿಯ ವಿಶಿಷ್ಟ ಸಾಮರ್ಥ್ಯ ಗುರುತಿಸಿ ಬೆಳೆಸುವುದು, ಬಯಸುವ ಕಲಿಕೆಯ ಆಯ್ಕೆ ಸ್ವಾತಂತ್ರ್ಯ ಕಲ್ಪಿಸುವುದಾಗಿದೆ ಎಂದು ಹೇಳಿದರು.

ಶಿಕ್ಷಣ ತಜ್ಞ ಶ್ರೀಧರ್ ಮಾತನಾಡಿ, ಮಾರ್ಚ್ ತಿಂಗಳಲ್ಲಿಯೇ ಈ ಯೋಜನೆ ಸಂಬಂಧಿಸಿದಂತೆ ಸಿದ್ಧತೆಗಳು ನಡೆದಿತ್ತು. ಅಲ್ಲದೆ ದೇಶದ ಅನೇಕ ರಾಜ್ಯಗಳು ನೀತಿಯ ಕುರಿತು ಯೋಚಿಸುವಷ್ಟರಲ್ಲಿ ನ.30 ರಂದು ತಜ್ಞರ ಸಮಿತಿಯು ರಾಷ್ಟ್ರೀಯ ಶಿಕ್ಷಣ ನೀತಿ ಕರ್ನಾಟಕ



"ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಷ್ಠಾನ ಅವಕಾಶಗಳು ಮತ್ತು ಮುಂದಿನ ದಾರಿ" ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ಉದ್ಘಾಟಿಸಿದರು. ಮುಕ್ತ ವಿವಿ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ಮೈಸೂರು ವಿವಿ ಕುಲಸಚಿವ ಡಾ.ಆರ್.ಶಿವಪ್ಪ, ಮುಕ್ತ ವಿವಿ ಕುಲಸಚಿವ ಡಾ.ಲಿಂಗರಾಜ ಗಾಂಧಿ, ಇತರರು ವೇದಿಕೆಯಲ್ಲಿ ಇದ್ದಾರೆ

ಶಿಕ್ಷಣದ ನವಜ್ಯೋತಿ ಹೆಸರಿನಲ್ಲಿ ವರದಿ ನೀಡಿತು. ಇದಕ್ಕೆ ಡಿ.7 ರಂದು ರಾಜ್ಯ ಸಚಿವ ಸಂಪುಟವು ಅನುಮೋದ 'ನೆಯನ್ನು ನೀಡಿತು ಎಂದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಮಾತನಾಡಿ, ಸೃಜನಶೀಲತೆ, ಕುತೂಹಲ ಮತ್ತು ಸಂವಹನ ಕೌಶಲ್ಯಗಳನ್ನು ಉತ್ತೇಜಿಸುತ್ತದೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ರಾಷ್ಟ್ರೀಯ ಶಿಕ್ಷಣ ನೀತಿ –2020 ಮತ್ತಷ್ಟು ಜ್ಞಾನ ನೀಡಲಿದೆ. ವಿದ್ಯಾರ್ಥಿಗಳು ಮತ್ತು ಯುವ ಪೀಳಿಗೆಯ ವಿದ್ವಾಂಸರು ಮುಖ್ಯವಾಗಿದ್ದು, ನಾವು ಆಲೋಚಿಸುವ ಮತ್ತು ಕಾರ್ಯಗತಗೊಳಿಸುವ ಎಲ್ಲವೂ ವಿದ್ಯಾರ್ಥಿಗಳ ಯೋಗ ಕ್ಷೇಮಕ್ಕೆ ಪೂರಕವಾಗಿರಬೇಕು ಎಂದರು. ಮುಕ್ತ ವಿವಿ ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್, ಅಖಿಲ ಭಾರತ ರಾಷ್ಟ್ರೀಯ ಶಿಕ್ಷಕರ ಸಂಘದ ಕಾರ್ಯದರ್ಶಿ ಶಿವಾನಂದ ಸಿಂಧನಕೇರ, ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕರ ಸಂಘದ ಅಧ್ಯಕ್ಷ ಡಾ. ರಘು ಅಕಮಂಚಿ, ಮೈಸೂರು ವಿವಿ ಕುಲಸಚಿವ ಡಾ. ಆರ್. ಶಿವಪ್ಪ, ಮುಕ್ತ ವಿವಿ ಕುಲಸಚಿವ ಡಾ. ಲಿಂಗರಾಜ ಗಾಂಧಿ, ಡಾ. ಗೋಪಾಲಕೃಷ್ಣ ಜೋಶಿ, ಕರ್ನಾಟಕ ರಾಜ್ಯ ಮಹಾ ವಿದ್ಯಾಲಯ ಶಿಕ್ಷಕರ ಸಂಘದ ಅಧ್ಯಕ್ಷ ಡಾ.ಕೆ.ವಿ.ಸುರೇಶ್, ಪ್ರಧಾನ ಕಾರ್ಯದರ್ಶಿ ಪ್ರೊ. ಜಿ. ಸಿ. ರಾಜಣ್ಣ , ಕಾರ್ಯದರ್ಶಿ ಡಾ.ಕುಮಾರ ಬೆಳಲೆ, ಸಮ್ಮೇಳನದ ಸಂಚಾಲಕ ಡಾ. ಪ್ರವೀಣ್ ಕುಮಾರ್ ಮೆಳ್ಳಳ್ಳಿ, ಬಿ. ನಿರಂಜನ ಮೂರ್ತಿ ಮೊದಲಾದವರು ಇದ್ದರು.

## ಭಾರತೀಯತೆಯ ನಿಜವಾದ ರಾಯಭಾರಿ ಸ್ವಾಮಿ ವಿವೇಕಾನಂದ: ಡಾ. ನಿರಂಜನ

**ಮಾನಸಗಂಗೋತ್ರಿ ವಾರ್ತೆ, ಮೈಸೂರು:** ಸ್ವಾಮಿ ವಿವೇಕಾನಂದ ಭಾರತೀಯ ಧರ್ಮ ಮತ್ತು ಭಾರತೀಯತೆಯ ನಿಜವಾದ ರಾಯಭಾರಿ ಎಂದು ಮೈಸೂರು ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ನಿರಂಜನ ವಾನಳ್ಳಿ ತಿಳಿಸಿದರು. ಮೈಸೂರು ವಿವಿ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ಹಾಗೂ ನೌಕರರ ಒಕ್ಕೂಟವು ಜ.12 ಮಂಗಳವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ 158ನೇ ಜಯಂತೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, 158 ವರ್ಷ ಕಳೆದರೂ ವಿವೇಕಾನಂದರು ಎಲ್ಲರ ನಡುವೆ ಸ್ಫೂರ್ತಿ ಚಿಲುಮೆಯಾಗಿ ಇದ್ದಾರೆ ಎಂದರು. ವಿವೇಕರು ನಿಜವಾಗಿಯೂ ಕೇವಲ ಮನುಷ್ಯರೇ. ರಾಜಕೀಯ ಕುಟುಂಬ ಹಿನ್ನೆಲೆ ಮತ್ತು ಹುಟ್ಟುತ್ತಲೆ ಬಾಯಿಯಲ್ಲಿ ಬೆಳ್ಳಿ ಚಮಚ ಇಟ್ಟುಕೊಂಡು ಹುಟ್ಟಿದವರಲ್ಲ. ಸಾಮಾನ್ಯ ಕುಟುಂಬದಲ್ಲಿ ಜನಿಸಿದರು. ಆದರೆ, ಮಹಾ ಮಾನವತ ವಾದಿಯಾಗಿ, ಮಹಾನ್ ಶಕ್ತಿಯಾಗಿ ಜಗತ್ತನ್ನೆ ವ್ಯಾಪ್ತಿಸಿದರು. ಧೈರ್ಯ, ಸ್ವಾಭಿಮಾನ




ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ಹಾಗೂ ನೌಕರರ ಒಕ್ಕೂಟವು ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ 158ನೇ ಜಯಂತೋತ್ಸವವನ್ನು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ನಿರಂಜನ ವಾನಳ್ಳಿ ಉದ್ಘಾಟಿಸಿ ಮಾತನಾಡಿದರು.

ಮತ್ತು ಆಧ್ಯಾತ್ಮ ಕ್ರೋಢೀಕರಣದ ಶಕ್ತಿಯೇ ಸ್ವಾಮಿ ವಿವೇಕಾನಂದರು. ಅವರಿಂದ ನಾವು ಕಲಿಯ ಬೇಕಿರುವುದು ಇದನ್ನೆ ಎಂದು ಅವರು ಹೇಳಿದರು. ಶಂಕರಾ ಚಾರ್ಯರು, ಯೇಸು ಮತ್ತು ವಿವೇಕಾನಂದರು ಬದುಕಿದ್ದು ಕಡಿಮೆ ವರ್ಷಗಳು. ಆದರೆ ಅವರು ಎಷ್ಟು ಶತಮಾನಗಳು ಕಳೆದರೂ ಜನರ ನಡುವೆ ಇರುತ್ತಾರೆ. ಮಹಾ ವ್ಯಕ್ತಿಗಳು ಭಾಷಣಗಳಲ್ಲಿ ಉಳಿದು ಬಿಡುತ್ತಾರೆ. ಆದರೆ, ವಿವೇಕಾನಂದರು ಹಾಗೆ ಆಗಬಾರದು ಎಂದರು.

ಡಿಸಿಪಿ ಡಾ.ಎ.ಎನ್.ಪ್ರಕಾಶ್ ಗೌಡ, ಮೈಸೂರು ವಿವಿ ಕುಲಪತಿಗಳ ವಿಶೇಷಾಧಿಕಾರಿ ಡಾ . ಎಚ್. ಕೆ. ಚೇತನ್, ಓಜಸ್ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಕೆ. ಪಿ. ಪ್ರದ್ಯುಮ್ನ, ವಿಮಾನ ನಿಲ್ದಾಣ ಸಲಹಾ ಸಮಿತಿ ಸದಸ್ಯ ಮೋಹನ್, ಮತ್ತು ಇತರರು ಭಾಗವಹಿಸಿದರು.

## ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಜಾತಿ, ಧರ್ಮ ಮೀರಿ ಅರಿಯಬೇಕು: ಪ್ರೊ.ಜಿ.ಹೇಮಂತಕುಮಾರ್

**ಮಾನಸಗಂಗೋತ್ರಿ ವಾರ್ತೆ, ಮೈಸೂರು:** ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಜಾತಿ, ಧರ್ಮ ಮೀರಿ ಅರಿಯಬೇಕು ಎಂಬುದನ್ನು ಭಾರತ ಭಾಗ್ಯವಿಧಾತ ಕೃತಿ ಹೇಳಿಕೊಡುತ್ತದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅಭಿಪ್ರಾಯಪಟ್ಟರು. ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿವಿ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಮಾನವ ಬಂಧುತ್ವ ವೇದಿಕೆ, ಪರಿವರ್ತನ ಫೌಂಡೇಷನ್ ಸಹಯೋಗದಲ್ಲಿ ಜ.8 ಶುಕ್ರವಾರ ಆಯೋಜಿಸಿದ್ದ ಡಾ.ಕೃಷ್ಣಮೂರ್ತಿ ಚಮರಂ ಅವರ 25ನೇ ಕೃತಿ ಭಾರತ ಭಾಗ್ಯವಿಧಾತ ಕೃತಿ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ




ಡಾ.ಕೃಷ್ಣಮೂರ್ತಿ ಚಮರಂ ರವರ ಭಾರತ ಭಾಗ್ಯವಿಧಾತ ಕೃತಿ ಬಿಡುಗಡೆಯಲ್ಲಿ ಪ್ರೊ.ಜಿ.ಹೇಮಂತಕುಮಾರ್ ಮತ್ತು ಇತರರು ವೇದಿಕೆಯಲ್ಲಿ ಇದ್ದಾರೆ.

ಕೃತಿ ಈಗಾಗಲೇ ಎರಡು ಮುದ್ರಣ ಕಂಡಿದ್ದು, ಈಗ ಪರಿಷ್ಕೃತ ಮೂರನೇ ಮುದ್ರಣಗೊಂಡಿದೆ. ಅಂಬೇಡ್ಕರ್ ಪ್ರಸ್ತುತ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಅಧ್ಯಾಯನ ಮಾಡಿ ದಾಖಲಿಸಲಾಗಿದೆ.

ಗುಲ್ಬರ್ಗ ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಆರ್.ನಿರಂಜನ ಮಾತನಾಡಿ, ಅಂಬೇಡ್ಕರ್ ಅವ–ರಿಗೆ ಇಷ್ಟೊಂದು ಗೌರವ ಸಿಗಲು ಅವರ ಜ್ಞಾನವೇ ಕಾರಣ ಎಂದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗುಬ್ಬಿಗೂಡು ರಮೇಶ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಬದುಕು ಅನುಸ–ರಿಸುವ ಮಾರ್ಗವಾಗಿದ್ದು, ಅಂಬೇಡ್ಕರ್ ಎಂದರೆ ಕೇವಲ ಮೀಸಲಾತಿ ಎಂದು ಬಿಂಬಿಸಲಾಗಿದೆ. ಅವರ ಬದುಕು, ಸಾಧನೆಯ ಮಾಹಿತಿ ತಿಳಿಸುವ ಕೆಲಸ ಆಗಬೇಕಿದೆ. ತಮ್ಮ ಬದುಕಿನುದ್ದಕ್ಕೂ ಯಾರ ಬಗ್ಗೆಯೂ ನಕರಾತ್ಮಕವಾಗಿ ಮಾತನಾಡಿದವರಲ್ಲ. ಅವರು ಕಂಡಿದ್ದ ಕನಸುಗಳನ್ನು ನನಸಾಗಿಸುವ ನಿಟ್ಟಿನಲ್ಲಿ ವಿದ್ಯಾವಂತರು ಜಾಗೃತರಾಗಬೇಕು. ಅಂಬೇಡ್ಕರ್ ವಾದ ಮತ್ತು ಪ್ರಸ್ತುತ ರಾಜಕಾರಣ ಒಳಗೊಂಡಂತೆ ಎಲ್ಲಾ ವಿಷಯಗಳನ್ನು ಲೇಖಕರು ಯಾವುದೇ ಪಕ್ಷ ಪಾತ್ರಕ್ಕೆ ಒಳಗಾಗದೆ ಈ ಪುಸ್ತಕದಲ್ಲಿ ಬರೆದಿದ್ದಾರೆ ಮರೆಮಾಚಿದ ಹಲವು ವಿಷಯಗಳನ್ನು ಸಮಾಜಕ್ಕೆ ತಿಳಿಸುವ ಕೆಲಸ ಮಾಡಿದ್ದಾರೆ. ಅಂಬೇಡ್ಕರ್ ಬಗ್ಗೆ ಇನ್ನಷ್ಟು ಓದುವಂತೆ ಪುಸ್ತಕ ನಮ್ಮನ್ನು ಪ್ರೇರೇಪಿಸುತ್ತದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ವೈ.ಡಿ.ರಾಜಣ್ಣ, ಲೇಖಕ ಕೃಷ್ಣಮೂರ್ತಿ ಚಮರಂ, ಕೃಷಿ ವಿಜ್ಞಾನಿ ಡಾ.ವಸಂತ್ ಕುಮಾರ್ ತಿಮಕಾಪುರ, ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಸಂದೇಶ ಮಣಗಳ್ಳಿ ಮೊದಲಾದವರು ಇದ್ದರು.

## ಸುಭಾಷಿತ

ನಿಮ್ಮೊಬ್ಬರ ಮೇಲೆಯೇ ಇಡೀ ಕೆಲಸವೂ ಬಿದ್ದಿದೆಯೇನೋ ಎಂಬಂತೆ ನೀವು ಪ್ರತಿಯೊಬ್ಬರೂ ಕೆಲಸ ಮಾಡಿಕೊಂಡು ಹೋಗಿ.

– ಸ್ವಾಮಿ ವಿವೇಕಾನಂದ

ಸಂಪಾದಕೀಯ

# ಸೈಬರ್ ಜಾಗೃತಿ ಮೂಡಲಿ

ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಎಲ್ಲವೂ ಡಿಜಿಟಲೀಕರಣಗೊಳ್ಳುತ್ತಿದೆ. ಗ್ರಾಮೀಣ ಮಟ್ಟದಲ್ಲಿ ಸ್ಮಾರ್ಟ್ ಫೋನ್, ಇಂಟ-ರ್‌ನೆಟ್ ಸಂಪರ್ಕ ತಲುಪುವುದರಿಂದ ಅಂತರ್ಜಾಲ ಬಳಕೆ ವ್ಯಾಪಕವಾಗಿ ಹೆಚ್ಚಿದೆ. ಅಲ್ಲದೆ, ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ವಹಿವಾಟುಗಳು ಆನ್‌ಲೈನ್‌ನಲ್ಲಿ ನಡೆಯುತ್ತಿದ್ದು, ಜನರ ಸಮಯ ಮತ್ತು ಶ್ರಮವನ್ನು ಉಳಿಸಿವೆ. ಜತೆಗೆ ಆರ್ಥಿಕತೆಯಲ್ಲಿ ಪಾರದರ್ಶಕತೆ ತರಲು ಸಹಕಾರಿಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಸೈಬರ್ ಸುರಕ್ಷತೆಯ ಬಗ್ಗೆ ಅರಿವು ಇಲ್ಲದಿರುವುದು ಮತ್ತು ಸರ್ಕಾರ ಕೂಡ ಇದನ್ನು ಗಂಭೀರವಾಗಿ ಪರಿಗಣಿಸದೆ ಇರುವುದರಿಂದ ಮೋಸ, ಕಳ್ಳತನದ ಪ್ರಕರಣಗಳು ಹೆಚ್ಚುತ್ತಲೇ ಸಾಗಿದ್ದು, ಎಚ್ಚರಿಕೆಯ ಗಂಟೆ ಮೊಳಗಿದೆ. ಮತ್ತೊಂದೆಡೆ, ಮೆಸೇಜಿಂಗ್ ಆ್ಯಪ್, ವಾಟ್ಸಪ್ ಹ್ಯಾಕಿಂಗ್ ಪ್ರಕರಣ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇದರಿಂದ ಖಾಸಗಿ ಮಾಹಿತಿ ಸೇರಿ ಮಹತ್ವದ ಅಂಶಗಳು ಸೋರಿಕೆಯಾಗುವ ಆತಂಕ ಸೃಷ್ಟಿಯಾಗಿದೆ. ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳಂತೂ ದಿನ ನಿತ್ಯದ ವಹಿವಾಟಿನ ಪ್ರಮುಖ ಭಾಗವಾಗಿ ಬಿಟ್ಟಿವೆ. ಆದರೆ, ಸೈಬರ್ ಅಪರಾಧಿಗಳು ಈ ಕಾರ್ಡುಗಳ ಮಾಹಿತಿಗಳನ್ನೇ ಕಳವು ಮಾಡಿ ಪಂಗನಾಮ ಹಾಕುತ್ತಿರುವ ಘಟನೆಗಳು ನಿಜಕ್ಕೂ ಶೋಚನೀಯ. ಇಂಟರ್‌ನೆಟ್‌ನ ಕರಾಳ ಜಗತ್ತು ಎಂದೇ ವ್ಯಾಖ್ಯಾನಿಸಲಾಗಿರುವ ಡಾರ್ಕ್ ವೆಬ್‌ನಲ್ಲಿ ಭಾರತದ 13 ಲಕ್ಷಕ್ಕೂ ಅಧಿಕ ಡೆಬಿಟ್, ಕ್ರೆಡಿಟ್ ಕಾರ್ಡ್ ಮಾಹಿತಿ ಸೋರಿಕೆ ಆಗಿದ್ದಲ್ಲದೆ, ಸೈಬರ್ ಕಳ್ಳರು ಮಾಹಿತಿಯನ್ನು ಆನ್‌ಲೈನ್ ತಾಣಗಳಲ್ಲಿ ಮಾರಾಟಕ್ಕಿರುವುದು ತಾಜಾ ವಿದ್ಯಮಾನ. ಭಾರತದ ವಿಷಯಕ್ಕೆ ಬಂದರೆ, ಇಲ್ಲಿನ ಪೇಮೆಂಟ್ ನೆಟ್‌ವರ್ಕ್ ತುಂಬಾ ದುರ್ಬಲ ಮತ್ತು ಅಸುರಕ್ಷಿತವಾಗಿದೆ. ಮುಖ್ಯವಾಗಿ, ರಾಷ್ಟ್ರೀಯ ಸೈಬರ್ ರಕ್ಷಣಾ ನೀತಿ (2013) ಕಡತಗಳಲ್ಲೇ ಉಳಿದುಕೊಂಡಿದೆ. ಇಂಥ ಹೊತ್ತಿನಲ್ಲಿ ಭಾರತಕ್ಕೆ ಕಠಿಣ ಸೈಬರ್ ಕಾನೂನಿನ ಅವಶ್ಯಕತೆ ಇದೆ. ಸರ್ಕಾರ ಮತ್ತು ಸಂಬಂಧಿತ ಇಲಾಖೆಗಳು ಜನರಲ್ಲಿ ಜಾಗೃತಿ ಮೂಡಿಸುವ, ಸೈಬರ್ ಸುರಕ್ಷತೆಯ ಕ್ರಮಗಳನ್ನು ವಿವರಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಬೇಕಿದೆ. ಜನಸಾಮಾನ್ಯರು ಕೂಡ ಸುರಕ್ಷಿತ ಬ್ರೌಸಿಂಗ್ ನೀತಿಯನ್ನು ಅಳವಡಿಸಿಕೊಳ್ಳಬೇಕು ಮತ್ತು ಆ್ಯಪ್ ಇತ್ಯಾದಿ ವಹಿವಾಟುಗಳಿಗೆ ಜೋಡಿಸಲಾಗಿರುವ ಡೆಬಿಟ್, ಕ್ರೆಡಿಟ್ ಕಾರ್ಡುಗಳಲ್ಲಿ ಹೆಚ್ಚಿನ ಮೊತ್ತ ಇಡಬಾರದು. ವಾಟ್ಸಪ್ ಬಳಕೆಯಲ್ಲೂ ಸುರಕ್ಷತೆಗೆ ಆದ್ಯತೆ ಇರಲಿ. ಒಂದು ತಪ್ಪು ಕ್ಲಿಕ್ ಕೂಡ ಅನಾಹುತಕ್ಕೆ ಎಡೆ ಮಾಡಿಕೊಡುತ್ತದೆ. ಇಂಥ ಘಟನೆಗಳು ಮರುಕಳಿಸುವ ಮುನ್ನ ವ್ಯವಸ್ಥೆ ಎಚ್ಚೆತ್ತುಕೊಳ್ಳಬೇಕಿದೆ.


**ಸಂಪಾದಕರು**

**ಪ್ರೊ. ನಿರಂಜನ**

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

**ವಿದ್ಯಾರ್ಥಿ ಸಂಪಾದಕರು**

ತಂಗಂ.ಜಿ.ಗೋಪಿನಾಥಂ

ಸುರೇಶ್.ಎಸ್

ಸ್ವರ್ಣ ಕಿತ್ತೂರು

**ಅಧ್ಯಾಪಕ ಸಲಹೆಗಾರರು**

**ಡಾ.ಗೌತಮ್ ದೇವನೂರು.ಪಿ**

ಅತಿಥಿ ಉಪನ್ಯಾಸಕರು

**ಪುಟ ವಿನ್ಯಾಸ**

ಸ್ವರ್ಣ ಕಿತ್ತೂರು


# ಕಾಲ ಚಕ್ರದಡಿ ಪ್ರೇಮ ನಿವೇದನೆ, ಬುದ್ಧನ ಬಳಿ ಬೋಧನೆ

● ತಂಗಂ.ಜಿ. ಗೋಪಿನಾಥಂ

**ಇದು ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ವಿಶೇಷ**




ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಕ್ಯಾಂಪಸ್ ಅಂದ ತಕ್ಷಣ ಥಟ್ ಅಂಥ ನೆನಪಿಗೆ ಬರೋದು ಇಲ್ಲಿ ಕಣ್ಮನ ಸೆಳೆಯೋ ಕ್ಲಾಕ್ ಟವರ್‌ನ ಟಿಕ್‌ಟಿಕ್ ಗಡಿಯಾರ. ದಿನ ವಾಯು ವಿಹಾರಕ್ಕೆಂದು ಬರುವವರನ್ನೂ ಈ ಗಡಿಯಾರ ತಲೆ ಎತ್ತಿ ನೋಡುವಂತೆ ಆಕರ್ಷಿಸುತ್ತಿದೆ. ಮೊಬೈಲ್ ನೆಟ್ವರ್ಕ್ ಕಳೆದುಕೊಂಡು ಪರದಾಡುವ ಮುಖ್ಯವಾದ ಸ್ಥಳ ಇದು. ಇಲ್ಲಿ ಫ್ರೆಂಡ್ಸ್ ಮಾತನಾಡೊಕೆ, ಹರಟೆ ಹೊಡೆಯೋಕೆ, ಬರ್ತ್‌ಡೇ ಸೆಲೆಬ್ರೇಷನ್ಸ್, ಪ್ರೇಮ ನಿವೇದನೆಗಳಿಗೆ ಹೇಳಿ ಮಾಡಿಸಿದಂತಿ-ರುವ ಸ್ಥಳ ಎಂದರೆ ಅದು ಮಾನಸ ಗಂಗೋತ್ರಿಯ ಕ್ಲಾಕ್ ಟವರ್. ಹಸಿರು ಗಿಡಮರಬಳ್ಳಿ, ಮನಸಿಗೆ ಮುದ ನಿಡೋ ವಾತಾವರಣ. ಅಷ್ಟು ಸ್ವಚ್ಛಂದವಾಗಿದೆ ಇಲ್ಲಿನ ಪರಿಸರ. ಇಲ್ಲಿ ಫ್ರೆಂಡ್ಸ್ ಮಾತನಾಡೊಕೆ, ಹರಟೆ ಹೊಡೆಯೋಕೆ, ಅಸೈನ್ಮೆಂಟ್ಸ್ ಬರೆಯೋಕೆ, ಬರ್ತ್‌ಡೇ



ಸೆಲೆಬ್ರೇಷನ್ಸ್, ಓದುವುದಕ್ಕೆ ಹೇಳಿ ಮಾಡಿಸಿದಂತಿರುವ ಸ್ಥಳ ಎಂದರೆ ಅದು 'ಬುದ್ಧ ಸ್ಟಾಚು'(ಬುದ್ಧನ ಪ್ರತಿಮೆ). ವೃತ್ತಾಕಾರದ ವಿಶಾಲವಾದ ಜಗುಲಿಯ ಮೇಲೊಂದು ಅಶ್ವಥ ವೃಕ್ಷ ಅದರ ಆಶ್ರಯದಲ್ಲಿ ಶ್ವೇತ ಶಿಲೆಯಿಂದ ಮಾಡಿದ ಸುಂದರ ಬುದ್ಧನ ಪ್ರತಿಮೆ, ಅಲ್ಲಿನ ಹಸಿರ ಹಾಸು, ತಂಪಾದ ಗಾಳಿ ಬೆಳಕು, ಹಚ್ಚ ಹಸಿರು ಇಂದ ಕುಡಿದು ಶಾಂತಿ, ಧನಾತ್ಮಕ ಚಿಂತನೆಯನ್ನು ಮೂಡಿಸುತ್ತದೆ. ವಯಸ್ಸಾದವರು ಧ್ಯಾನ ಮಾಡಲು ಹೇಳಿ ಮಾಡಿಸಿದ ಜಾಗ ಇದಾಗಿದೆ. ಗೆಳೆಯರು ಆರಾಮವಾಗಿ ಕುಳಿತು ಮಾತನಾಡಲು ಆಸನಗಳು ಮತ್ತು ಮಳೆ ಬಂದರೆ ನೆನೆಯದಂತೆ ಸೂರು ನೀಡೊ ಅರಳಿಮರ, ಎಲ್ಲಾ ಯುವಕ ಯುವತಿಯರು ಫೋಟೋ ಶೂಟ್ ಮಾಡಲು ಪರ್ಫೆಕ್ಟ್ ಪ್ಲೇಸ್ ಅಂ-ದರೆ ತಪ್ಪಾಗಲಾರದು. ವಯಸ್ಸಾದವರು ಧ್ಯಾನ ಮಾಡಲು ಹೇಳಿ ಮಾಡಿಸಿದ ಜಾಗ ಇದಾಗಿದೆ.

# ಸುಂದರ ತ್ವಚೆಗೊಂದು ಸಲಹೆ



ಕೊತ್ತಂಬರಿ ಸೊಪ್ಪು ಅಡುಗೆಯ ಪರಿಮಳವನ್ನು ಹೆಚ್ಚಿಸುತ್ತದೆ. ಇದು ಆರೋಗ್ಯಕ್ಕೂ ಕೂಡ ತುಂಬಾ ಉತ್ತಮ. ಹಾಗೆ ಇದರಿಂದ ನಿಮ್ಮ ಚರ್ಮದ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು. ಇದು ಮೊಡವೆಗಳನ್ನು, ಬ್ಲಾಕ್ ಹೆಡ್ಸ್, ಸುಕ್ಕುಗಳನ್ನು ಕಡಿಮೆ ಮಾಡುತ್ತದೆ. ಇದನ್ನು ಬಳಸುವುದು ಹೇಗೆಂದು ತಿಳಿಯೋಣ. ಒಂದು ಕಪ್ ಕೊತ್ತಂಬರಿ ಸೊಪ್ಪನ್ನು ಪೇಸ್ಟ್ ಮಾಡಿಕೊಂಡು ಅದಕ್ಕೆ ಅರ್ಧ ಕಪ್ ಅಕ್ಕಿ ಹಿಟ್ಟನ್ನು ಸೇರಿಸಿ ಮಿಶ್ರಣ ಮಾಡಿ, ಆ ಮಿಶ್ರಣಕ್ಕೆ ಒಂದು ಚಮಚ ರೋಸ್ ವಾಟರ್ ಸೇರಿಸಿ ಪ್ಯಾಕ್ ತಯಾರಿಸಿ. ಬಳಿಕ ಮುಖವನ್ನು ಕ್ಲೆನ್ಸರ್ ಬಳಸಿ ಸ್ವಚ್ಛ ಮಾಡಿ, ಈ ಫೇಸ್ ಪ್ಯಾಕ್ ಅನ್ನು ಮುಖ ಮತ್ತು ಕುತ್ತಿಗೆಗೆ ಹಚ್ಚಿ ಇಪ್ಪತ್ತು ನಿಮಿಷದ ಬಳಿಕ ಸ್ವಲ್ಪ ಬೆಚ್ಚಗಿನ ನೀರಿನಲ್ಲಿ ಮುಖಕ್ಕೆ ವೃತ್ತಾ ಕಾರದಲ್ಲಿ ಮಸಾಜ್ ಮಾಡಿ. ಹೀಗೆ ಮಾಡುವುದರಿಂದ ಮೊಡವೆಗಳು ಹೋಗಿ, ಕಾಂತಿಯನ್ನು ಪಡೆಯುತ್ತದೆ. ವಾರಕ್ಕೊಮ್ಮೆ ಈ ಪ್ಯಾಕ್ ಬಳಸಿ. ಸುಂದರವಾಗಿ ಕಾಣಬೇಕು ಎಂದು ಪ್ರತಿಯೊಬ್ಬರು ಬಯಸುತ್ತಾರೆ. ಆದರೆ ವಯಸ್ಸಾದಂತೆ ಚರ್ಮ ಕಾಂತಿ ಕಳೆದು ಕೊಳ್ಳುತ್ತದೆ. ಹಳೆ ಕಲೆಗಳು ಕಪ್ಪು ಬಣ್ಣಕೆ ತಿರುಗಿ ಚರ್ಮದ ಸೌಂದರ್ಯವನ್ನು ಮತ್ತಷ್ಟು ಹಾಳುಮಾಡುತ್ತದೆ ಇದನ್ನು ಹೋಗಲಾಡಿಸಲು ಎಷ್ಟೇ ಪ್ರಯತ್ನ ಪಟ್ಟರೂ ಪ್ರಯೋಜನವಾಗಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಮನೆ ಮದ್ದು ಉತ್ತಮ. ಈ ಮನೆ ಮದ್ದನ್ನು ಬಳಸಿ ಸುಂದರವಾಗಿರಿ. – **ಸ್ವರ್ಣ, ಕಿತ್ತೂರು**

# ಓದುಗರ ಪತ್ರ....

**ಬಸ್ ತಂಗುದಾಣ ನಿರ್ಮಿಸಿ,**

ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ಆವರಣವು 740 ಎಕರೆಯಷ್ಟು ವಿಸ್ತೀರ್ಣವನ್ನು ಹೊಂದಿದ್ದು, ಕರ್ನಾಟಕದ ಮೊಟ್ಟ ಮೊದಲ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿಗೆ ಸಾವಿರಾರು ವಿದ್ಯಾರ್ಥಿಗಳು ಅಕ್ಕ ಪಕ್ಕದ ಹಳ್ಳಿ ಮತ್ತು ಬಡಾವಣೆಗಳಿಂದ ವ್ಯಾಸಂಗ ಮಾಡಲು ನಿತ್ಯವೂ ಬರುತ್ತಾರೆ. ನಗರ ಬಸ್ ನಿಲ್ದಾಣದಿಂದ ಬೋಗಾದಿಗೆ ಹೊರಡುವ ಮಾರ್ಗ ಮಧ್ಯದಲ್ಲಿ ಮೈಸೂರು ವಿವಿಯ ಮೌಲ್ಯ ಭವನದ ಬಳಿ ಬಸ್ ತಂಗುದಾಣ ವಿಲ್ಲದೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪರದಾಡುವಂತಾಗಿದೆ. ಅಸಮರ್ಪಕ ಸಾರಿಗೆ ವ್ಯವಸ್ಥೆಯಿಂದ ವಿದ್ಯಾರ್ಥಿಗಳು ವೇಳಾಪಟ್ಟಿ ಅನುಸಾರ ತರಗತಿಗೆ ತೆರಳುವಂತೆ ಆಗುತ್ತಿಲ್ಲ. ನೆಪಮಾತ್ರಕ್ಕೆ ನಗರ ಬಸ್ ನಿಲ್ದಾಣದಲ್ಲಿ ಬಸ್ಸಿನ ಮಾಹಿತಿ ಫಲಕವನ್ನು ಇಟ್ಟಿದ್ದಾರೆ. ಹೊರತು ಅದರ ಅನುಸಾರ ಯಾವ ಬಸ್ಸು ಬರುವುದಿಲ್ಲ. ಈ ನಡುವೆ ಎರಡು–ಮೂರು ಬಸ್ಸು ಒಟ್ಟಿಗೆ ಬರುತ್ತದೆ. ಕೆಲವು ಬಸ್ಸುಗಳು ನಿಲ್ದಾಣದಲ್ಲಿ ನಿಲ್ಲಿಸದೆ ಹೋಗುತ್ತಾರೆ. ಇದರಿಂದ ವಿದ್ಯಾರ್ಥಿಗಳು ಆಟೋ ಮಾಡಿಕೊಂಡು ಕಾಲೇಜಿಗೆ ಹೋಗುವ ಪರಿಸ್ಥಿತಿ ಉಂಟಾಗಿದೆ. ಹಾಗಾಗಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸಮಸ್ಯೆಯನ್ನು ನಿವಾರಿಸಬೇಕಾಗಿದೆ.

**– ತಂಗಂ.ಜಿ. ಗೋಪಿನಾಥಂ**

ಪತ್ರಿಕೋದ್ಯಮ ವಿದ್ಯಾರ್ಥಿ

**ವಿವಿ ಆವರಣದಲ್ಲಿ ವೇಗ ಮಿತಿಯ ಸೂಚನಾ ಫಲಕ ನಮೂದಿಸಿ**

ನಮ್ಮ ಮೈಸೂರು ವಿಶ್ವವಿದ್ಯಾಲಯ ಆವರಣ ತುಂಬಾ ವಿಶಾಲವಾಗಿ ಕೂಡಿದೆ ಉತ್ತಮವಾದ ಪರಿಸರ ಹಾಗೂ ಉದ್ಯಾನವನಗಳ ತೂಗುಯ್ಯಾಲೆಯಂತೆ ಹಸಿರಿನಿಂದ ಸುತ್ತುವರೆದಿದೆ. ಗಂಗೋತ್ರಿಯ ಆವರಣದಲ್ಲಿ ವಾಹನಗಳ ಓಡಾಟ ಸಾಮಾನ್ಯವಾಗಿ ಇದ್ದೇ ಇರುತ್ತದೆ ಏಕೆಂದರೆ ಪ್ರಸ್ತುತ ದಿನಗಳಲ್ಲಿ ವಾಹನ ವಿಲ್ಲದೆ ಓಡಾಟ ಊಹಿಸಲು ಸಾಧ್ಯವಿಲ್ಲ ವಾಹನಗಳಿಗೆ ದಾಸರಾಗಿದ್ದೇವೆ. ನಾವು ವಾಹನಗಳ ಮೇಲೆ ಕುಳಿತಾಗ ಸಿಂಹಾಸನದ ಮೇಲೆ ಕುಳಿತಂತೆ ಭಾವಿಸುವವರು. ಮಾನಸ ಗಂಗೋತ್ರಿಯ ಆವರಣದಲ್ಲಿ ವೇಗದ ಮಿತಿಯಲ್ಲಿ ವಾಹನಗಳನ್ನು ಚಲಾಯಿಸುವುದು ಉತ್ತಮ ಎಲ್ಲಾ ಕಡೆಗಳಲ್ಲೂ ಸಿಸಿಟಿವಿ ಇದ್ದರೂ ವೇಗವಾಗಿ ವಾಹನ ಚಾಲನೆ ಮಾಡುತ್ತಾರೆ, ಅಂತವರಿಗೆ ಸಂಬಂಧಪಟ್ಟ ಅಧಿಕಾರಿಗಳು ಶಿಕ್ಷೆಗೆ ಗುರಿಪಡಿಸಬೇಕು ಇಲ್ಲವಾದಲ್ಲಿ ದಂಡ ವಿಧಿಸಬೇಕು ವಿಶ್ವವಿದ್ಯಾನಿಲಯದ ಆವರಣದಲ್ಲಿ ವೇಗದಮಿತಿಯ ಸೂಚನೆಯನ್ನು ನೀಡಬೇಕು

**– ಸುರೇಶ್.ಎಸ್**

ಪತ್ರಿಕೋದ್ಯಮ ವಿದ್ಯಾರ್ಥಿ

**ಸ್ವಚ್ಛತೆಗಾಗಿ ಕಸದ ತೊಟ್ಟಿಗಳನ್ನು ಅಳವಡಿಸಿ**

ಎಲ್ಲಿ ನೋಡಿದರೂ ಮೈಸೂರು ವಿಶ್ವ ವಿದ್ಯಾನಿಲಯವು ಹಚ್ಚ ಹಸಿ-ರಿನಿಂದ ಕೂಡಿದ್ದು ಎಲ್ಲಾರ ಗಮನ ಸೆಳೆದಿದೆ. ಬಣ್ಣ ಬಣ್ಣದ ಹೂವುಗಳು ಇಲ್ಲಿ ಮುಖ್ಯ ಆಕರ್ಷಣೀಯವಾಗಿದ್ದು, ವಿವಿಧ ಬಗೆಯ ಮರಗಳನ್ನು ನಾವು ಇಲ್ಲಿ ನೋಡಬಹುದು. ಆದರೆ ದೃಷ್ಟಿ ಗೊಂಬೆಯಂತೆ ಸುಂದರವಾದ ಕ್ಯಾಂಪಸ್‌ನಲ್ಲಿ ಎಲ್ಲೆಂದರಲ್ಲಿ ಹರಡಿರುವ ಕಸದ ರಾಶಿಯಿಂದ ಕ್ಯಾಂಪಸ್‌ನ ನೋಟವನ್ನು ಹಾಳು ಮಾಡುತ್ತಿದೆ. ಇದರಿಂದ ಸೊಳ್ಳೆಗಳು ಹೆಚ್ಚುತ್ತವೆ ಮತ್ತು ಸಾಂಕ್ರಾಮಿಕ ರೋಗಗಳು ಹರಡುವಲ್ಲಿ ಇದು ಕಾರಣವಾಗುತ್ತದೆ. ಇದಕ್ಕೆ ಪರಿಹಾರವಾಗಿ ಪ್ರತಿ 100 ರಿಂದ 200 ಮೀಟರ್ ಒಳಗೆ ಒಣ ಮತ್ತು ಹಸಿ ಕಸ ಎಂದು ವಿಭಾಗಿಸಿ ಅಲ್ಲಲ್ಲಿ ಕಸದ ತೊಟ್ಟಿಯನ್ನು ಇಡಬೇಕಾಗಿದೆ ಮತ್ತು ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ಜೊತೆಗೆ ಸ್ವಚ್ಛತೆಯನ್ನು ಕಾಪಾಡಿ ಎಂದು ಸೂಚಿಸುವ ನಾಮ ಫಲಕಗಳನ್ನು ಹಾಕಬೇಕಾಗಿದೆ. ಇದರಿಂದ ಮಾನಸ ಗಂಗೋತ್ರಿಯ ಆವರಣವು ಸ್ವಚ್ಛವಾಗಿರುವುದರ ಜೊತೆಯಲ್ಲೇ ಕಸದ ವಿಸರ್ಜನೆ ಸರಿಯಾದ ರೀತಿಯಲ್ಲಿ ನಡೆಯಲು ಸಹಕಾರಿ ಆಗುತ್ತದೆ. ಇದ-ರಿಂದ ಪರಿಸರ ಸಂರಕ್ಷಣೆ ಮಾಡುವಲ್ಲಿ ಮೈಸೂರು ವಿಶ್ವ ವಿದ್ಯಾನಿಲಯವು ಮಾದರಿಯಾಗುತ್ತದೆ.

**–ಸ್ವರ್ಣ ಕಿತ್ತೂರು**

ಪತ್ರಿಕೋದ್ಯಮ ವಿದ್ಯಾರ್ಥಿನಿ

# ಭಾರತೀಯ ಸಂಸ್ಕೃತಿಯ ಮೂಲವೇ ಸೇವಾತತ್ವ

## ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತದಾನಂದಜಿ ಮಹಾರಾಜ್ ಅಭಿಮತ




**ಮೈವಿವಿಯ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಸ್ವಾಮಿ ಮುಕ್ತದಾನಂದಜಿ ಮಹಾರಾಜ್, ಪ್ರೊ.ಜಿ.ಹೇಮಂತ್ ಕುಮಾರ್, ಪ್ರೊ.ಆರ್.ಶಿವಪ್ಪ, ಡಾ.ಪೂರ್ಣಿಮಾ ಜೋಗಿ, ಡಾ.ಬಿ.ಚಂದ್ರಶೇಖರ ಮತ್ತು ಇತರರು ಇದ್ದಾರೆ.**

**ಮಾನಸ ಗಂಗೋತ್ರಿ ವಾರ್ತೆ, ಮೈಸೂರು:** ಭಾರತೀಯ ಸಂಸ್ಕೃತಿಯ ಮೂಲವೇ ಸೇವಾ ತತ್ವ. ಎಲ್ಲರೂ ನಮ್ಮವರು ಎಂಬ ಭಾವನೆ ಇದ್ದರೆ ಮಾತ್ರ ನಮಗೆ ಇನ್ನೊಬ್ಬರ ಸೇವೆ ಮಾಡಲು ಸಾಧ್ಯ ಎಂದು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತದಾನಂದಜಿ ಮಹಾರಾಜ್ ಹೇಳಿದರು. ಮೈಸೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಯುವ ಸಪ್ತಾಹ ಮತ್ತು ಎನ್‌ಎಸ್‌ಎಸ್ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸೇವಾ ಮನೋಭಾವವನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಲು ಆಗದ ಶಿಕ್ಷಣ ಅರ್ಥಹೀನ ಎಂದು ಸ್ವಾಮಿ ವಿವೇಕಾನಂದ ಹೇಳಿದ್ದಾರೆ. ಆದ್ದರಿಂದ ಶಿಕ್ಷಣದ ಮೂಲಕ ಸೇವೆಗೆ ಉತ್ತೇಜನ ನೀಡಬೇಕು. ಇಂದು ವಿದ್ಯಾವಂತರು ಸ್ವಾರ್ಥಿಗಳಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ನಮ್ಮ ದೇಶದಲ್ಲಿ ಹಲವಾರು ಸಂಘ ಸಂಸ್ಥೆಗಳು, ಸಮಾಜ ಸೇವಾ ಸಂಸ್ಥೆಗಳು ಇವೆ. ಆದರೆ, ಬೀದಿ ಬದಿಯಲ್ಲಿ ನರಳುತ್ತಿರುವ ಭಿಕ್ಷುಕರ ಕಡೆ ಗಮನ ನೀಡುವ ಕೆಲಸ ಇನ್ನೂ ಆಗಿಲ್ಲ. ಮೈಸೂರು ವಿವಿಯ ಎನ್‌ಎಸ್‌ಎಸ್ ಇತರ ಸಂಸ್ಥೆಗಳ ಜತೆ ಸೇರಿಕೊಂಡು ಅಂತಹ ಕೆಲಸ ಮಾಡಲಿ. ಮೈಸೂರಿನ ಬೀದಿಗಳಲ್ಲಿರುವ ಭಿಕ್ಷುಕರ ಪುನರ್ವಸತಿ ನಡೆಯಲಿ. ನಮ್ಮ ಮನಸ್ಸು ಬಡವರಿಗಾಗಿ ಮಿಡಿಯಬೇಕು ಎಂದು ಕಿವಿಮಾತು ಹೇಳಿದರು. ಎನ್‌ಎಸ್‌ಎಸ್ ನಡೆಸುವ ಸೇವಾ ಯೋಜನೆಗಳು ವಾರ್ಷಿಕ ಶಿಬಿರಗಳಿಗೆ ಮಾತ್ರ ಸೀಮಿತವಾಗದೆ ಸರ್ವವ್ಯಾಪಿ ಆಗಬೇಕಿದೆ. ಸಂಸತ್ತಿನಿಂದ ಆರಂಭವಾಗಿ ಗುಡಿಸಲಿನವರೆಗೆ, ವಿಶ್ವವಿದ್ಯಾಲಯದಿಂದ ಹಿಡಿದು ಎಲ್‌ಕೆಜಿವರೆಗೆ ಎಲ್ಲರಲ್ಲೂ ಸೇವಾ ಮನೋಭಾವ ಬೆಳೆಯಲಿ. ಹಾಗಾದಲ್ಲಿ ಮಾತ್ರ ಸೇವಾತತ್ವ ಆಧರಿಸಿದ ಪ್ರಗತಿಪರ, ಶಾಂತಿಯುತ ಆದರ್ಶ ಸಮಾಜದ ನಿರ್ಮಾಣ ಸಾಧ್ಯ ಎಂದರು. ಮೈಸೂರು ವಿ.ವಿ. ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಮಾತನಾಡಿ, ಕೊರೊನಾ ಸಂಕಷ್ಟದ ನಡುವೆಯೂ ವಿವಿ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಎನ್‌ಎಸ್‌ಎಸ್ ಸ್ವಯಂ ಸೇವಕ ಮತ್ತು ಸೇವಕಿಯರು 'ಕೊರೊನಾ ವಾರಿಯರ್' ಆಗಿ ಕೆಲಸ ಮಾಡಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಗೌರವಿಸಲಾಗಿದೆ ಎಂದು ಹೇಳಿದರು. ಕೊರೊನಾ ಕಾರಣದಿಂದ ಈ ವರ್ಷ ಎನ್‌ಎಸ್‌ಎಸ್ ಚಟುವಟಿಕೆಗಳು ವಿ.ವಿ ಅಧೀನ ಕಾಲೇಜುಗಳಲ್ಲಿ ನಡೆಯದೇ ಇದ್ದರೂ, ಸರ್ಕಾರದ ಮಾರ್ಗಸೂಚಿಯನ್ವಯ ಆನ್‌ಲೈನ್ ಮತ್ತು ಆಫ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 2019–2020ನೇ ಸಾಲಿನ ಎನ್‌ಎಸ್‌ಎಸ್ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಮೈಸೂರು ವಿ.ವಿ ಕುಲಸಚಿವ ಪ್ರೊ. ಆರ್.ಶಿವಪ್ಪ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಬಿ.ಚಂದ್ರಶೇಖರ, ಎನ್‌ಎಸ್‌ಎಸ್ ರಾಜ್ಯ ಅನುಷ್ಠಾನ ಅಧಿಕಾರಿ ಡಾ.ಪೂರ್ಣಿಮಾ ಜೋಗಿ, ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ ಇದ್ದರು.

# ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



**ಮಾನಸ ಗಂಗೋತ್ರಿ ವಾರ್ತೆ,** ಮೈಸೂರು ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ದಲಿತ ವಿದ್ಯಾರ್ಥಿ ಒಕ್ಕೂಟ ಮತ್ತು ಸಂಶೋಧಕರ ಸಂಘದ ವತಿಯಿಂದ ಜ.13 ಬುಧವಾರ ಪ್ರತಿಭಟನೆ ನಡೆಯಿತು. ಮೈಸೂರು ವಿಶ್ವ ವಿದ್ಯಾನಿಲಯದ ಕಾರ್ಯ ಸೌದಾ (ಕ್ರಾಫರ್ಡ್ ಹಾಲ್) ಮುಂದೆ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಪ್ರತಿಭಟನಾಕಾರರು ಮಂಗಳೂರು, ತುಮಕೂರು, ಶಿವಮೊಗ್ಗ ಇನ್ನಿತರ ವಿವಿಗಳಲ್ಲಿ ವಿತರಿಸುವಂತೆ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ, ಸಂಶೋಧಕರುಗಳಿಗೆ ಕೂಡಲೇ ಲ್ಯಾಪ್ ಟಾಪ್ ವಿತರಿಸಬೇಕು. ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿದ್ಯಾರ್ಥಿವೇತನ ಮಂಜೂರಾಗದೆ ಅಂತಿಮ ಪದವಿ, ದ್ವಿತೀಯ ಸ್ನಾತಕೋತ್ತರ ವಿದ್ಯಾರ್ಥಿಗಳ ಮುಂದಿನ ಶಿಕ್ಷಣಕ್ಕೆ ತೊಂದರೆಯಾಗಿದ್ದು ಅದನ್ನು ಕೂಡಲೇ ಸರಿಪಡಿಸಬೇಕು. ಪದವಿ, ಸ್ನಾತಕೋತ್ತರ ಪದವಿಯ ವಿವಿಧ ವಿಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ವಿದ್ಯಾರ್ಥಿ ನಿಲಯಗಳಲ್ಲಿ ಸ್ನಾನಕ್ಕೆ ಬಿಸಿ ನೀರು, ಮಿನಿ ಗ್ರಂಥಾಲಯ, ಕ್ರೀಡಾ ಸಾಮಗ್ರಿಗಳು, ದೈಹಿಕ ವ್ಯಾಯಾಮ ಶಾಲೆ, ಕಂಪ್ಯೂಟರ್ ಕೊಠಡಿ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಸಂಶೋಧನಾ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮತ್ತು ಹಾಸ್ಟೆಲ್‌ನಲ್ಲಿ ವಾಸವಾಗಿರುವ ಸಂಶೋಧಕರ ಹೆಚ್‌ಆರ್‌ಎ ವಿಷಯದಲ್ಲಿ ಉಂಟಾಗಿರುವ ದೋಷಗಳನ್ನು ಕೂಡಲೇ ಬಗೆಹರಿಸಬೇಕು. ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಅನುಕೂಲವಾಗುವಂತೆ ಶಾಶ್ವತ ತರಬೇತಿ ಕಟ್ಟಡವನ್ನು ತೆರೆಯಬೇಕು. ದಿನದ 24 ತಾಸು ಗ್ರಂಥಾಲಯ ಮತ್ತು ಆರೋಗ್ಯ ಕೇಂದ್ರಗಳನ್ನು ತೆರೆಯುವಂತೆ ಒತ್ತಾಯಿಸಿದರು. ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ, ಸಮಸ್ಯೆ ಬಗೆಹರಿಸುವಂತೆ ಭರವಸೆ ನೀಡಿದರು. ಮಹೇಶ್ ಸೋಸ್ಲೆ, ಸಂದೇಶ್ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ವಿವಿಯಲ್ಲಿ ಆರು ತಿಂಗಳಿಗೊಮ್ಮೆ ಆರೋಗ್ಯ ತಪಸಣಾ ಶಿಬಿರ: ಪ್ರೊ.ಜಿ.ಹೇಮಂತ್ ಕುಮಾರ್

**ಮಾನಸಗಂಗೋತ್ರಿ ವಾರ್ತೆ,** ಮೈಸೂರು ಮೈಸೂರು ವಿವಿ ಉಪನ್ಯಾಸಕರು ಸೇರಿದಂತೆ ಇತರೆ ಸಿಬ್ಬಂದಿಯ ಆರೋಗ್ಯದ ಹಿತದೃಷ್ಟಿಯಿಂದ 6 ತಿಂಗಳಿಗೊಮ್ಮೆ ವಿವಿಯ ಆವರಣದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ತಿಳಿಸಿದರು.

ಮೈಸೂರು ವಿವಿ ಯ ಮಾನಸ ಗಂಗೋತ್ರಿಯ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಆವರಣದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಆಸೋಸಿಯೇಷನ್ ಇಂಡಿಯಾ ಸಹಯೋಗದಲ್ಲಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಪ್ರಾಣಿಶಾಸ್ತ್ರ ವಿಭಾಗ, ರೇಡಿಯೋ ಮಾನಸ, ಸಮೂಹ ರೇಡಿಯೋ ಕೇಂದ್ರದ ಆಶ್ರಯದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ತಪಾಸಣೆಗೆ ಒಳಗಾಗದೆ ಅನೇಕರಿಗೆ ಕಾಯಿಲೆ ಇರುವುದು ತಿಳಿಯದಂತಾಗಿ ಹೃದಯಾಪಘಾತದಿಂದ ಅನೇಕರು ಮೃತಪಟ್ಟರು. ಇಂದು ತಂತ್ರಜ್ಞಾನವು ಹೆಚ್ಚು ಅಭಿವೃದ್ಧಿ ಆಗಿದ್ದು, ತಪಾಸಣೆಗೆ ಒಳಗಾಗುವ ಮೂಲಕ ಶೀಘ್ರವೇ ಕಾಯಿಲೆಯನ್ನು ಪತ್ತೆ ಹಚ್ಚ ಬಹುದು ಎಂದು ತಿಳಿಸಿದರು. ಕುಲಸಚಿವ ಆರ್. ಶಿವಪ್ಪ ಮಾತನಾಡಿ, ಆರೋಗ್ಯವಾಗಿರುವುದು ನಮ್ಮದೇ ಜವಾಬ್ದಾರಿ. ಸರ್ಕಾರ, ಪೋಷಕರು ಅಥವಾ ಬೇರೆ ಯಾರನ್ನು ಅನಾರೋಗ್ಯಕ್ಕೆ ದೂರಲು ಸಾಧ್ಯವಿಲ್ಲ. ಆರೋಗ್ಯವೇ ಭಾಗ್ಯ ಎಂಬುದನ್ನು ಅರಿತು ಅದಕ್ಕೆ ಹೆಚ್ಚಿನ ಮಹತ್ವ ಕೊಡಬೇಕು ಎಂದು ಸಲಹೆ ನೀಡಿದರು. ಜಠರ ಶಸ್ತ್ರಚಿಕಿತ್ಸಾ ತಜ್ಞ ಡಾ.ಪಿ.ಎಸ್. ಅರವಿಂದ್, ನರರೋಗ ಶಸ್ತ್ರಚಿಕಿತ್ಸಾ ತಜ್ಞ ಡಾ. ಹರ್ಷ ಹುಲಿಯಪ್ಪ, ಹೃದ್ರೋಗ ತಜ್ಞ ಡಾ. ಶಿವಕುಮಾರ್ ವಿವಿಯ ಸಿಬ್ಬಂದಿಗೆ ಆರೋಗ್ಯ ತಪಾಸಣೆ ನಡೆಸಿದರು. ಪ್ರಾಣಿಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಎಸ್. ಹೆಗಡೆ, ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಮಾಲಿನಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಎಂ.ಎಸ್. ಸಪ್ನ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಎಚ್.ಆರ್. ಸೋಮಣ್ಣ, ಆಸ್ಪತ್ರೆಯ ಸಿಬ್ಬಂದಿಗಳು ಮತ್ತು ಇತರರು ಇದ್ದರು.



**ಮೈಸೂರು ವಿವಿಯಿಂದ ಆಯೋಜಿಸಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಚಾಲನೆ ನೀಡಿದರು. ಕುಲಸಚಿವ ಆರ್. ಶಿವಪ್ಪ, ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಮಾಲಿನಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಎಂ. ಎಸ್. ಸಪ್ನ ಇದ್ದಾರೆ.**

# ಮಾನಸಗಂಗೋತ್ರಿ ಆವರಣ ಸ್ವಚ್ಛಗೊಳಿಸಿದ ಪ್ರಜಾಪಾರ್ಟಿ !



**ಮಾನಸ ಗಂಗೋತ್ರಿ ವಾರ್ತೆ,** ಮೈಸೂರು ಕರ್ನಾಟಕ ಪ್ರಜಾಪಾರ್ಟಿ(ರೈತಪರ್ವ) ವತಿಯಿಂದ ಜ.10 ಭಾನುವಾರ ಮಾನಸ ಗಂಗೋತ್ರಿ ಆವರಣವನ್ನು ಸ್ವಚ್ಛಗೊಳಿಸಲಾಯಿತು. ಪಕ್ಷದ ಸಂಸ್ಥಾಪಕ ಅಧ್ಯಕ್ಷ ಬಿ.ಶಿವಣ್ಣ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಮುಖಂಡರು, ಭಾನುವಾರ ಬೆಳಗ್ಗೆ ಗ್ಲೌಸ್, ಮಾಸ್ಕ್ ಧರಿಸಿ, ಮಾನಸ ಗಂಗೋತ್ರಿ ಆವರಣದಲ್ಲಿ ಬಿದ್ದಿದ್ದ ಪ್ಲಾಸ್ಟಿಕ್, ನೀರು, ಜ್ಯೂಸ್ ಬಾಟಲ್ ಮತ್ತಿತರ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಿದರು. ವಾಯು ವಿಹಾರಿಗಳು, ಕ್ರೀಡಾ ಪಟುಗಳು, ವಿದ್ಯಾರ್ಥಿಗಳು, ಸಾರ್ವಜನಿಕರು ಕೈಜೋಡಿಸಿದರು. ಸ್ವಚ್ಛತಾ ಕಾರ್ಯದಲ್ಲಿ ಪಾರ್ಟಿಯ ರಾಜ್ಯ ಉಪಾಧ್ಯಕ್ಷ ಕೆ.ಜೆ. ಯೋಗೇಶ್, ಜಂಟಿ ಕಾರ್ಯದರ್ಶಿ ಬಿ.ಆರ್.ಲೋಕೇಶ್, ಕಾರ್ಯದರ್ಶಿ ಕೆ.ಎಸ್.ಮಹೇಶ್ ಅರಸ್, ಖಜಾಂಚಿ ಬಿ.ಆದರ್ಶ, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉದ್ಬೂರು ಎಂ.ಚಂದ್ರಶೇಖರ್, ಜಿಲ್ಲಾ ಸಂಚಾಲಕ ಪಿ.ಉಮೇಶ್, ಜಿಲ್ಲಾ ಮಹಿಳಾ ಘಟಕದ ಉಪಾಧ್ಯಕ್ಷೆ ತಾರಾ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಹಂಚ್ಯಾ ಯೋಗೇಶ್ ಗೌಡ, ವಕೀಲ ಕುಮಾರ್, ಹೆಚ್.ಡಿ.ಕೋಟೆ ಪ್ರಧಾನ ಕಾರ್ಯದರ್ಶಿ ಜೆ.ಸಿ.ಸೋಮೇಶ್ ಇತರರು ಇದ್ದರು.

# ಯುವ ಪ್ರೇಮಿಗಳಿಂದ ಅರಳಿದ 'ತ್ರಿರೋಸಸ್'

● ತಂಗಂ.ಜಿ. ಗೋಪಿನಾಥಂ




ಪ್ರೀತಿ ಅನ್ನೋದು ಎರಡು ಪದ ಆದರೆ ಅದರ ಅರ್ಥ ವಿಶಾಲ ಪ್ರೀತಿ ಇಲ್ಲದ ಬದುಕನ್ನ ಯಾರು ಸಹ ಯಾವತ್ತೂ ಊಹಿಸಲು ಸಾಧ್ಯವಿಲ್ಲ. ಯಾಕೆಂದರೆ ಪ್ರೀತಿ ಅನ್ನೋ ಭಾವನೆನೆಯ ಹಾಗೆ. ಪ್ರೀತಿ ಎರಡು ಮನಸುಗಳ ಸಂಗಮ. ಈ ಎಳೆಯನ್ನು ಇಟ್ಟುಕೊಂಡು ಮೈಸೂರಿನ ಯುವ ನೂತನ ಪ್ರತಿಭೆಗಳು ತಿಲಕ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ತ್ರಿರೋಸಸ್ ಎನ್ನುವ ಶೀರ್ಷಿಕೆಯಡಿ 20 ನಿಮಿಷದ ಕಿರುಚಿತ್ರ ನಿರ್ಮಿಸಿದ್ದು, ಅದೀಗ ಯೂಟ್ಯೂಬ್‌ನಲ್ಲಿ ಬಾರಿ ಸದ್ದು ಮಾಡುವುದಲ್ಲದೆ ಸಿನಿ ರಸಿಕರನ್ನು ಅದರಲ್ಲೂ ಯುವ ಮನಸುಗಳ ಮನ ಗೆದ್ದಿದೆ. ಈ ಚಿತ್ರದಲ್ಲಿ ಪ್ರೀತಿಯನ್ನು ಮೂರು ಕಥೆಗಳ ಮೂಲಕ ವಿಭಿನ್ನ ಕಥೆಯ ಮಜಲುಗಳ ಮೂಲಕ ವ್ಯಕ್ತ ಪಡಿಸಿದ್ದಾರೆ. ಈ ಚಿತ್ರದಲ್ಲಿ ಮೊದಲ ರೋಸ್ ಕಥೆಯಲ್ಲಿ ಪ್ರೀತಿ ಆರಂಭವಾದರೆ ದ್ವಿತೀಯ ರೋಸ್ ಕಥೆಯಲ್ಲಿ ಪ್ರೀತಿಯ ನೈಜ ಚಿತ್ರಣ ವ್ಯಕ್ತವಾಗಿದೆ. ಇನ್ನು ಮೂರನೇ ರೋಸ್ ಕಥೆಯಲ್ಲಿ ಪ್ರೀತಿ ಕೊನೆಯಾಗಿರುವ ಆ ಪ್ರೇಮಿಗಳು ದೂರ ಆಗುವ ದೃಶ್ಯ!.

ಈ ಕಿರುಚಿತ್ರದಲ್ಲಿ ಇರುವುದು ಒಂದೇ ಭಾವನೆ ಅದುವೆ ಪ್ರೀತಿ. ಪ್ರೀತಿಗೆ ಯಾವುದೇ ಭಾಷೆ ಬೇಕಾಗಿಲ್ಲ ಪ್ರೀತಿಗೆ ಬೇಕಾಗಿರುವುದು ಭಾವನೆ ಮಾತ್ರ ಅದು ದ್ವಿತೀಯ ರೋಸ್ ಕಥೆಯಲ್ಲಿದೆ. ಕನ್ನಡ ಭಾರದ ಮಲಯಾಳಂ ಹುಡುಗಿ, ಮಲೆಯಾಳಿ ಬರದ ಕನ್ನಡ ಹುಡುಗ!. ಅವರ ನಡುವೆ ಇದದ್ದು ಪ್ರೀತಿ ಅನ್ನೋ ಮಧುರವಾದ ಭಾವನೆ. ಪ್ರೀತಿಯಲ್ಲಿ ಯಾವ ಜಾತಿ ಅಂತಸ್ತು ಪ್ರತಿಷ್ಟೆ ಬೇಕಿಲ್ಲ. ಅಲ್ಲಿ ಬೇಕಿರುವುದು ಪರಸ್ಪರ ನಂಬಿಕೆ ಮತ್ತು ಪ್ರೀತಿ ಮಾತ್ರ. ಇನ್ನು ಮೊದಲ ರೋಸ್ ಈಗಿನ ಲವ್ ಕಥೆ ಇದೇತರಹ ಆರಂಭವಾಗುತ್ತದೆ. ಹುಡುಗ ಹುಡುಗಿ ಹಿಂದೆ ಬೀಳುವುದು ದಿನ ಫಾಲೋ ಮಾಡುವುದು. ಹೀಗೆ ಪ್ರೀತಿಯು ಶುರುವಾಗುವುದು. ಆ ಹುಡುಗಿ ಅವಳ ಪ್ರೀತಿನ ಬೈದು ತೋರಿಸುತ್ತಳೆ. ಬೈದು ಬುದ್ದಿ ಹೇಳುವವರು ನಮ್ಮ ಮೇಲೆ ಪ್ರೀತಿ ಇರುವವರ ಹೊರತು, ಬೇರೆಯವರು ಅಲ್ಲ. ಇನ್ನು ಮೂರನೇ ರೋಸ್ ಕಥೆಯಲ್ಲಿ ಆ ಹುಡುಗಿ ಕುಟುಂಬದ ಒತ್ತಾಯಕ್ಕೆ ಮಣಿದು, ಆ ಹುಡುಗನ ಪ್ರೀತಿಯನ್ನು ಸದಾ ತನ್ನೊಂದಿಗೆ ತನ್ನ ಉಸಿರಿನ ಕೊನೆವರೆಗೂ ಹೊತ್ತು ಸಾಗುತ್ತಾಳೆ. ಪ್ರೀತಿ ಅವರ ಇಬ್ಬರ ನಡುವೆಯೂ ಇತ್ತು. ಪ್ರೀತಿ ಅಂದರೆ ಬರೀ ಪಡೆದು ಕೊಳ್ಳುವುದು ಅಲ್ಲ. ತ್ಯಾಗವೂ ಪ್ರೀತಿಯೇ ಎಂದು ಮೂರನೇ ರೋಸ್ ಕಥೆಯಲ್ಲಿ ತುಂಬಾನೇ ಚೆನ್ನಾಗಿ ಹೇಳಿದ್ದರೆ. ನಿಜಾ ಅಲ್ವ ಪ್ರೀತಿ ಎಂದು ಸಾಯದು ಪ್ರೀತಿಗೆ ಇರೋ ಶಕ್ತೀನೇ ಹಾಗೆ. ಪ್ರೀತಿ ಮಾಡುವುದು ಅಲ್ಲ, ಪ್ರೀತಿ ಆಗುವುದು ನಮಗೆ ತಿಳಿಯದೇ. ಈ ಕಿರುಚಿತ್ರ ಪ್ರೀತಿ ಮಾಡೋ ಬೇರೆ ಬೇರೆ ಪ್ರೇಮಿಗಳ ಕಥೆಯನ್ನು ತುಂಬಾನೇ ಚೆನ್ನಾಗಿ ಚಿತ್ರಿಸಿದ್ದಾರೆ. ಒಟ್ಟಾರೆ ಹೊಸ ಪ್ರತಿಭೆಗಳು ಅದ್ಭುತವಾದ ಮೂರು ಕಥೆಗಳ ಮೂಲಕ ಪ್ರೀತಿಯ ವಿವಿಧ ಮಜಲುಗಳನ್ನು ವಿಭಿನ್ನ ರೀತಿಯಲ್ಲಿ ತೋರಿಸಿದ್ದಾರೆ.

ಕಿರುಚಿತ್ರದ ಬಗ್ಗೆ ಕನ್ನಡ ಚಿತ್ರರಂಗದ ನಟಿಯರಾದ ಮೇಘನಾ ಶೆಟ್ಟಿ, ಲವ್ ಮಾಕ್ಟೇಲ್ ಖ್ಯಾತಿಯ ಅಮೃತ ಅಯ್ಯರ್, ಅಮೃತಾಂಜನ್ ಖ್ಯಾತಿಯ ಪಾಯಲ್ ಚಂಗಪ್ಪ, ಸ್ಫೂರ್ತಿ ರಮಿತಾ, ಗೌರವ್ ಶೆಟ್ಟಿ, ಕಾರ್ತಿಕ್ ರೂವಾರಿ ಹಾಗೂ ನಿರ್ದೇಶಕ ಮೋಹಿತ್ ಸೇರಿದಂತೆ ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮೂರು ಲವ್ ಬರ್ಡ್ಸ್‌ಗಳ ಕಥೆಗಳನ್ನು ತಮ್ಮದೇ ಆದ ಹೊಸ ರೀತಿಯಲ್ಲಿ ಚಿತ್ರ ನಿರ್ಮಿಸಿದ್ದು, ಜನರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದೆ.

ಮುಂದೆ ಬೆಳ್ಳಿ ತೆರೆಗೆ ಬರುವ ತವಕದಲ್ಲಿ ಇರುವ ಪ್ರತಿಭೆಗಳು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಒಟ್ಟಾರೆ ಎಲ್ಲರೂ ನೋಡಬೇಕಾದ ಅದ್ಭುತ ಚಿತ್ರ ಇದಾಗಿದೆ. ಈ ತಂಡದ ಶ್ರಮ ಏನಾದರೂ ಮಾಡಬೇಕೆಂಬ ತುಡಿತ ಸಿನಿಮಾದಲ್ಲಿ ಎದ್ದು ಕಾಣುತ್ತದೆ. ಕಿರುಚಿತ್ರಕ್ಕೆ ತಿಲಕ್ ಆಕ್ಷನ್ ಕಟ್ ಹೇಳಿದ್ದು, ಪ್ರಜ್ಞಾ ಪೂವಮ್ಮ, ನಿಹಾರಿಕಾ ಮುತ್ತಪ್ಪ, ದಿವಿನ್ ಶೆಟ್ಟಿ, ಕಾರ್ತಿಕ್ ಸದಾಶಿವ, ಲೀಲಾವತಿ, ಮನೋಜ್ ಅದ್ಭುತವಾಗಿ ನಟಿಸಿದ್ದಾರೆ. ಇನ್ನೂ ಅಂಕಿತ್ ಚೌಧರಿ ಕ್ಯಾಮರಾ ಕಣ್ಣಲ್ಲಿ ಅತ್ಯದ್ಭುತವಾಗಿ ಚಿತ್ರಿಸಿದ್ದು, ಮಡಿಕೇರಿ, ಕೊಡಗು, ಮೈಸೂರು ಸುತ್ತಮುತ್ತ ಅತಿ ಅದ್ಭುತವಾಗಿ ಚಿತ್ರೀಕರಣ ನಡೆಸಿದ್ದಾರೆ.



ಮೈಸೂರು ವಿಶ್ವ ವಿದ್ಯಾನಿಲಯದ ಮಾನಸ ಗಂಗೋತ್ರಿಯ ಡಿಪ್ಲೋಮಾ ಫಿಲಂ ಸ್ಟಡೀಸ್ ಅಧ್ಯಯನ ಮುಗಿಸಿದ ನಮ್ಮ ತಂಡ, ಒಂದು ಒಳ್ಳೆ ಸಿನಿಮಾ ಮಾಡೋಣ ಅಂತ ಮುನ್ನುಗ್ಗಿ, ಯುವ ಪ್ರತಿಭೆಗಳಿಂದ ಕೂಡಿರುವ ಲವ್ ಸ್ಟೋರಿಯನ್ನು ತಯಾರಿ ಮಾಡಿ, 20 ನಿಮಿಷದಲ್ಲಿ ಮೂರು ಕಥೆಯನ್ನು ಸೇರಿಸಿ ಉತ್ತಮವಾದ ಮನರಂಜನೆಯನ್ನು ಒಳಗೊಂಡ ಚಿತ್ರಕತೆಯನ್ನು ಬರೆದುಕೊಂಡು ಉತ್ತಮ ಗುಣಮಟ್ಟದಲ್ಲಿ ನಿರ್ಮಿಸಿದ್ದೇವೆ. ಇದುವರೆಗೂ ನಮ್ಮ ಕಿರುಚಿತ್ರಕ್ಕೆ ಅತೀ ಹೆಚ್ಚು ವೀವರ್ಸ್ ಆಗಿದ್ದು, ಒಳ್ಳೆ ಕಥೆಯ ಮೂಲಕ ಬೆಳ್ಳಿತೆರೆಗೆ ಬರುವಂತೆ ಅವಕಾಶ ಬಂದಿದೆ. ಮುಂದೆ ಒಂದೊಳ್ಳೆ ಕಥೆಯ ಮೂಲಕ ಬೆಳ್ಳಿ ತೆರೆಗೆ ಪಾದಾರ್ಪಣೆ ಮಾಡಲು ನಿರ್ಧರಿಸಿದ್ದೇವೆ.


• **ತಿಲಕ್**, ತ್ರಿರೋಸಸ್ ಕಿರುಚಿತ್ರದ ನಿರ್ದೇಶಕ



ನಮ್ಮ ಕಿರುಚಿತ್ರಕ್ಕೆ ಕನ್ನಡ ಚಿತ್ರರಂಗದ ನಟಿಯರು ಮತ್ತು ಯುವ ಮನಸುಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಮ್ಮ ಸಿನಿಮಾವನ್ನು ಇಷ್ಟರ ಮಟ್ಟಿಗೆ ಇಷ್ಟ ಪಡುತ್ತಾರೆ ಎಂದು ಊಹಿಸಿರಲಿಲ್ಲ. ಈ ರೆಸ್ಪಾನ್ಸ್ ನೋಡಿ ತುಂಬಾ ಖುಷಿಯಾಗಿದೆ. ಈ ಸಿನಿಮಾವನ್ನು ನೋಡಿ, ನಟಿಸುವ ಅವಕಾಶಗಳು ಸಿಕ್ಕರೆ ನಾನು ನಟಿಸುತ್ತೇನೆ.

• **ನಿಹಾರಿಕಾ ಮುತ್ತಪ್ಪ**, ತ್ರಿರೋಸಸ್ ಕಿರುಚಿತ್ರದ ನಟಿ

## ಗತಿ: ನೈಜ ಬದುಕಿನ ಅನಾವರಣ



ನಾಟಕ ವಿಮರ್ಶೆ

ಎಸ್.ಎನ್.ಸೇತುರಾಂರವರ ನಿರ್ದೇಶನ ಮತ್ತು ಸರಳ ಸಂಭಾಷಣೆ ಅವರ ನಾಟಕಗಳನ್ನು ನೋಡುವಂತೆ ಪ್ರೇರೇಪಿಸಿ ಅವರ ನಾಟಕಗಳನ್ನು ನೋಡುತ್ತಾ ಬಂದಿದ್ದೇನೆ. ಗತಿ ನಾನು ಇತ್ತೀಚೆಗೆ ನೋಡಿದ ನಾಟಕ. ಇಲ್ಲಿ ಎಸ್. ಎನ್.ಸೇತುರಾಂ ರವರು ತಾತನ ಪಾತ್ರ ನಿರ್ವಹಿಸಿದ್ದು, ಮಕ್ಕಳಿಂದ ದೂರವಾಗಿ ಒಂಟಿಯಾಗಿ ಬದುಕುತ್ತಿರುವ ಇವರಿಗೆ ಕ್ಯಾನ್ಸರ್. ಆದರೂ ತೆರೆಮೇಲೆ ಹಾಸ್ಯಮಯವಾಗಿ ತನ್ನ ಬದುಕಿನ ಬಗ್ಗೆ ಹೇಳಿಕೊಳ್ಳುವುದು ಇಷ್ಟೇ ಬದುಕು ಅನ್ನಿಸಿಬಿಡುತ್ತದೆ. ತನ್ನ ಮೊಮ್ಮಗಳ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತತ್ತರಿಸುವ ಸ್ಥಿತಿ ಗಂಭೀರವಾಗಿದ್ದು, ದೀಪಾ ಇಲ್ಲಿ ಮೊಮ್ಮಗಳಾಗಿದ್ದು, ರ್‍ಯಾಂಕ್ ಪಡೆದರು ಕೆಲಸವಿಲ್ಲದೆ ತನ್ನವರಿಂದ 13ನೇ ವರ್ಷದಲ್ಲಿ ಅತ್ಯಾಚಾರಕ್ಕೆ ಒಳಗಾದ ಹಾಗೂ ಅದರ ಬಗ್ಗೆ ಯಾರಲ್ಲಿಯೂ ಹೇಳಿಕೊಳ್ಳದೇ ಅನುಭವಿಸುತ್ತಿರುವ 28 ವರ್ಷದ ಯುವತಿಯ ಪಾತ್ರ ಮಾಡಿದ್ದು, ತೆರೆಯ ಮೇಲೆ ಸರಳ ಮತ್ತು ನೈಜವಾಗಿ ಸಂಭಾಷಣೆ ನಡೆಸುವುದನ್ನು ನೋಡಿದಾಗ ಅವಳದೇ ಬದುಕಿನ ಬಗ್ಗೆ ಇದರ ಮಧ್ಯ ಮಗಳು ಒಂಟಿ. ತನ್ನ ಚಿಕ್ಕಪ್ಪನಿಂದಲೇ 13ನೇ ವಯಸ್ಸಿನಲ್ಲಿ ಅತ್ಯಾಚಾರಕ್ಕೊಳಗಾಗಿ ಅದನ್ನು ಹೇಳಿಕೊಂಡಾಗ ಯಾರು ನಂಬದೇ ಒದ್ದಾಡುವ ಅವಳು ಇದಕ್ಕೆಲ್ಲ ಕಾರಣ ಅಜ್ಜನೆ ಎಂದು ಅವರ ಮೇಲೆ ಕೋಪಿಸಿಕೊಂಡಿರುತ್ತಾಳೆ. ಮಕ್ಕಳನ್ನು ಬೆಳೆಸಿದ ರೀತಿ ಇದಕ್ಕೆಲ್ಲ ಕಾರಣವೆಂದು ಮತ್ತು ಪ್ರಶ್ನೆ ಎಂದರೆ ಏನು ಎಂದು ತಾತನ ಬಳಿ ಉತ್ತರಕ್ಕಾಗಿ ನಿಂತಿರುವಳು. ತನ್ನ ಹೆಂಡತಿ ಅವನ ಆತ್ಮೀಯ ಗೆಳೆಯನೊಂದಿಗೆ ಸಂಬಂಧ ಬೆಳೆಸಿ ಹುಟ್ಟಿದ ಮಗನೇ ಆ ನಿನ್ನ ಚಿಕ್ಕಪ್ಪ. ತಾಯಿ, ಮಗಳು, ಅಕ್ಕ-ತಂಗಿ ಎಂಬಾ ಯಾವ ಭಾವನೆ ಇಲ್ಲದೆ, ಅತ್ಯಾಚಾರ ಮಾಡುವ ಗಂಡಸು ನಾಗರಿಕತೆಯನ್ನು ಮರೆಯುತ್ತಾನೆ. ದೇವರು ಸೃಷ್ಟಿ ಕ್ರಿಯೆಯಲ್ಲಿ ಸುಖವಿಟ್ಟ ಅದು ಸೃಷ್ಟಿಗಾಗಿ, ಆದರೆ ಸೃಷ್ಟಿ ಬೇಡ ಸುಖ ಬೇಕು ಅದು ಆತ್ಮೀಯ ಗೆಳೆಯನ ಹೆಂಡತಿ ಆದರೂ, ಮಗಳಾದರೂ ನಡೆಯುತ್ತದೆ. ಕಾರಣ ಹುಡುಕುತ್ತಾ ಹೋದರೆ ಇದಕ್ಕೆ ಕಾರಣ ತಂದೆತಾಯಿಗಳು. ಅಂದು ಮಕ್ಕಳಿಗೆ ಒಡೆದು ಭಯದಲ್ಲಿ ತಪ್ಪು ದಾರಿ ತುಳಿಯದ ಹಾಗೆ ನೋಡಿಕೊಳ್ಳುತ್ತಿದ್ದರು, ಇಂದು ಮಕ್ಕಳು ಏನು ಮಾಡುತ್ತಿದ್ದಾರೆ ಏನಾಗಿದೆ ಅನ್ನೋದೇ ಮರೆತಿದ್ದಾರೆ ಇದರ ಪರಿಣಾಮವಾಗಿ ಮಕ್ಕಳು ಸಂಬಂಧಗಳ ಬೆಲೆ ತಿಳಿಯದೆ, ತಮ್ಮ ತಂದೆ-ತಾಯಿ ಮುಪ್ಪಿಗೆ ಬಂದಾಗ ಅವರಿಗೆ ಹೊರೆ ಆಗುತಾರೆ. ಒಂದು ಕುಟುಂಬದಲ್ಲಿ ಹಿರಿಯ ಜೀವಗಳ ಪ್ರಾಮುಖ್ಯತೆ ಇಲ್ಲಿ ತಿಳಿಯುತ್ತದೆ. ವಯಸ್ಸಾದ ಮೇಲೆ ಅಜ್ಜ ಅಜ್ಜಿ ಮೊಮ್ಮಕ್ಕಳಿಗೆ ಮಾರ್ಗದರ್ಶಕರಾಗಿ ಅವರ ಆರೈಕೆಯಲ್ಲಿ ಬದುಕುತ್ತಾರೆ. ಹಿರಿಯ ಜೀವಗಳಿಗೆ ಮೊಮ್ಮಕ್ಕಳು ಜೊತೆಗಾರರು ಅವರಿದ್ದಾರೆ ಎಲ್ಲವೂ ಸರಿ, ಅವರ ಪ್ರಾಮುಖ್ಯತೆ ವಯಸ್ಸಾದ ಮೇಲೆ ಹೆಚ್ಚು ಎಂದು ನನಗೆ ಅನಿಸಿದ್ದು. ನಾಟಕವು ಸರಳವಾಗಿ ಬೇಗ ಮನಸ್ಸಿಗೆ ಹತ್ತಿರವಾಗುತ್ತದೆ. ಕುಟುಂಬದವರು ಒಟ್ಟಿಗೆ ನೋಡಲೇ ಬೇಕಾದ ನಾಟಕವಿದು. **-ಸ್ವರ್ಣ**

## ನಿರ್ಧಾರ-ಗೊಂದಲಗಳ ನಡುವೆ ಬದುಕು

ಮಗು ನೀನು ದೊಡ್ಡವಳು ಆದಮೇಲೆ ಏನಾಗುವೆ? ಎಂದು ದೊಡ್ಡವರು ಕೇಳಿದಾಗ ಮಗು ತಟ್ಟನೆ "ನಾನ್ ದೊಡ್ಡವ್ಳು ಆದ್ಮೇಲೆ ಪೊಲೀಸ್ ಆಗ್ತೀನಿ ನಿಮ್ಗೆ ಶೂಟ್ ಮಾಡ್ತೀನಿ ಅಥವಾ ಡಾಕ್ಟರ್ ಆಗ್ತೀನಿ ನಿಮ್ಗೆ ಇಂಜೆಕ್ಷನ್ ಮಾಡ್ತೀನಿ" ಎನ್ನುವುದು. ಮಕ್ಕಳು ಯಾಕೆ ಪೊಲೀಸ್ ಅಥವಾ ಡಾಕ್ಟರ್ ಆಗಬೇಕು ಎಂದು ಹೇಳುವರು, ಕಾರಣ ಇಷ್ಟೆ ಬಾಲ್ಯದಲ್ಲಿ ಮಕ್ಕಳನ್ನು ಬಯ



ಪಡಿಸುವವರು ಈ ಇಬ್ಬರೇ, ಮಕ್ಕಳು ತಪ್ಪು ಮಾಡಿದಾಗ ಪೊಲೀಸ್ ಬರ್ತಾರೆ ಎತ್ಕೊಂಡು ಹೋಗಿ ಬಿಡ್ತಾರೆ ಎಂದು ಮತ್ತೆ ಜ್ವರ ಬಂದಾಗ ಮಕ್ಕಳಿಗೆ ವೈದ್ಯ ಇಂಜೆಕ್ಷನ್ ಇಡಿದು ಬಂದರೆ ರಾಕ್ಷಸನಂತೆ ಕಾಣುತ್ತಾನೆ. ಆದರೆ ಬೆಳೆಯುತ್ತಾ ನಾನು ಏನಾಗಬೇಕು ಎನ್ನುವ ಕನಸು ಹಂತ ಹಂತವಾಗಿ ಬದಲಾಗುತ್ತಾ ಹೋಗುತ್ತದೆ. ಸ್ಕೂಲ್‌ಗೆ ಬಂದಾಗ ತನ್ನ ನೆಚ್ಚಿನ ಟೀಚರ್‌ನ ನೋಡಿದಾಗ ಟೀಚರ್ ಆಗ್ಬೇಕು ಎಂದು, ಪಿಯುಸಿಗೆ ಬಂದಾಗ ಎಲ್ಲವೂ ಬದಲಾಗುವುದು ಸದ್ಯಢವಾಗಿರುವುದೇ ಇಲ್ಲ. ನೋಡಿದೆಲ್ಲ ಆಕರ್ಷಿಸುತ್ತದೆ. ಕೆಲವರು ಕಠಿಣವಾಗಿ ಓದಿ ಇಂಜಿನಿಯರಿಂಗ್, ಎಂಬಿಬಿಎಸ್ ಮಾಡಲು ನಿರ್ಧಾರ ತೆಗೆದುಕೊಳ್ಳುವರು ಮತ್ತೆ ಕೆಲವರು ಪ್ರೀತಿಯ ಬಲೆಗೆ ಸಿಕ್ಕಿ ಪ್ರೀತಿಸಿದವರೊಂದಿಗೆ ಮದುವೆಯಾಗಲು ನಿರ್ಧಾರ ಮಾಡುತ್ತಾರೆ. ಗೊಂದಲಗಳ ನಡುವೆ ಬದುಕಿನ ನಿರ್ಧಾರ ಬದಲಾಗಿ ಬಿಎಸ್ಸಿ, ಬಿಎ, ಬಿಕಾಂ ಹಾಗೂ ಬಿಬಿಎಂ ಪದವಿಗೆ ಬರುವವರು ಇದ್ದಾರೆ ಅವರಲ್ಲಿ ಎಂಜಿನಿಯರಿಂಗ್, ಡಾಕ್ಟರ್‌ಗಳು ಆಗಲು ಹೊರಟಿದ್ದವರು ಇರುವರು, ಅಲ್ಲಿ ವಿಜ್ಞಾನ ಅವರ ಜ್ಞಾನವನ್ನು ಅಡವಿಟ್ಟು ಕೊಂಡಿರುತ್ತದೆ. ಹಾಗಾದರೆ ಅಲ್ಲಿಯ ನಿರ್ಧಾರ ಎಲ್ಲಿ ಹೋಯಿತು? ಹೀಗೆ ಬಾಲ್ಯದಿಂದ ಇಡಿದು ತಾನು ಹೀಗೆ ಆಗಬೇಕೆಂಬ ನಿರ್ಧಾರಗಳು ಬದಲಾಗಿ ಮತ್ತೆ ಇನ್ನೇನೋ ಮಾಡಲು ಹೋಗಿ, ಮಾಡಿದನ್ನು ಬಿಟ್ಟು ಮತ್ತೇನೂ ಆಗಿರುತ್ತಾರೆ. ನಿರ್ಧಾರಗಳು ನಿರ್ದಿಷ್ಟವಾಗಿ ಇರುವುದೆ ಇಲ್ಲ ಅಲ್ಲಿ ನಿರ್ಧಾರ ಅನ್ನೋ ಪದಕ್ಕೆ ಅರ್ಥ ಇನ್ನೂ ನಿರ್ಧಾರ ಆಗಿಲ್ಲ. **-ಸ್ವರ್ಣ**